**ಸಾಕ್ಷಿಯನ್ನು ದಿನಾಂಕ 18.09.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ವಿ.ವಿ. ವಕೀಲರಿಂದಃ**

ಮದ್ದಮ್ಮ ರೆಡ್ಡಿ ಯವರು ಬೈರೆಡ್ಡಿ ಮೇಲೆ ಕೇಸನ್ನು ಹಾಕಿದ್ದಾರೆ. ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಮದ್ದಮ್ಮ, ಬೈರೆಡ್ಡಿ ಮತ್ತು ರಾಮಲಕ್ಷ್ಮಮ್ಮ ಅಂದರೆ 3 ನೇ ಪ್ರತಿವಾದಿಯ ಮಕ್ಕಳು ಇರುತ್ತಾರೆ. ಸರ್ವೆ ನಂ. 12/12 ರಲ್ಲಿ ಕಡಲೆಕಾಯಿ ಬೆಳೆ ಹಾಕಿದ್ದಾರೆ ಎಂದರೆ ಸದರಿ ಕಡಲೆಕಾಯಿ ಬೆಳೆಯನ್ನು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಮದ್ದರೆಡ್ಡಿಯವರು ಬೆಳೆದಿರುತ್ತಾರೆ. ಸದರಿ ಮದ್ದರೆಡ್ಡಿಯವರು 3 ನೇ ಪ್ರತಿವಾದಿ ರಾಮಲಕ್ಷ್ಮಮ್ಮನ ಮಗನಾಗಬೇಕು. 3 ನೇ ಪ್ರತಿವಾದಿ ರಾಮಲಕ್ಷ್ಮಮ್ಮ ಹಾಗೂ ಅವರ ಗಂಡ ಮತ್ತು ಮದ್ದರೆಡ್ಡಿಯವರ ತಂದೆ ಈ ಮೊದಲು ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿ. ರಾಮಲಕ್ಷ್ಮಮ್ಮನ ಗಂಡ ಮದ್ದರೆಡ್ಡಿ ಯವರು ಸರ್ವೆ ನಂ. 12/12 ರಲ್ಲಿ 12 ವರ್ಷಗಳಿಂದ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಮದ್ದರೆಡ್ಡಿ ಯವರು ವಾದಿಯ ತಂದೆಯಿಂದ ಸದರಿ ಜಮೀನನ್ನು ಕ್ರಯ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ ಆದರೆ ವಾದಿ ಮತ್ತು ಪ್ರತಿವಾದಿ ಇಬ್ಬರು ಸ್ವಾಧೀನದಲ್ಲಿದ್ದಾರೆ. ಕ್ರಯ ಆಗಿದ್ದ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 3 ನೇ ಪ್ರತಿವಾದಿ ರಾಮಲಕ್ಷ್ಮಮ್ಮನ ಗಂಡನ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಇತ್ತು ಎಂದರೆ ಸಾಕ್ಷಿಯ ಪ್ರಸ್ತುತ ಇದೆ ಎಂದು ನುಡಿಯುತ್ತಾರೆ. ಮದ್ದರೆಡ್ಡಿಯವರ ಹೆಸರಿನಲ್ಲಿ ಖಾತೆ ಪಹಣಿ ಇದ್ದು ಅವರು ತೀರಿಕೊಂಡ ನಂತರ 3 ನೇ ಪ್ರತಿವಾದಿಗೆ ಪಾವತಿ ವಾರಸು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾವತಿ ಖಾತೆ ಮಾಡಿಸಿಕೊಳ್ಳಲು 1 ನೇ ವಾದಿ ಮತ್ತು ಕುಟುಂಬದವರು ತಕರಾರು

ಮಾಡಿದ್ದರು ಎಂದರೆ ಸರಿ. ಸದರಿ ತಕರಾರನ್ನು ವಜಾ ಮಾಡಿ ಸದರಿ ಪಾವತಿ ಖಾತೆಯನ್ನು 3 ನೇ ಪ್ರತಿವಾದಿಗೆ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಖಾತೆ ಪಾವತಿಯನ್ನು ಮದ್ದಮ್ಮ ಮತ್ತು ಬೈರೆಡ್ಡಿ ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು ಅದು ವಜಾ ಆಗಿದೆ ಎಂದರೆ ಗೊತ್ತಿಲ್ಲ. ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಒಟ್ಟಾಗಿ ಇದ್ದಾರೆ ಎಂದರೆ ಸರಿಯಲ್ಲ. ಅವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರು ವಿಭಾಗ ಮಾಡಿಕೊಳ್ಳಲು ಆಸ್ತಿ ಇಲ್ಲ ಎಂದು ನುಡಿಯುತ್ತಾರೆ. ಐಟಂ ನಂ. 8 ಮತ್ತು 9 ಆಸ್ತಿಗಳು ಹೊರತು ಪಡಿಸಿದರೇ ಉಳಿದೆಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ವಿಭಾಗ ಮಾಡಿಕೊಂಡಿದ್ದರು ಸಹ ಬೈರೆಡ್ಡಿ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ವಾದಿ ಮತ್ತು ಪ್ರತಿವಾದಿಗಳು ನನ್ನ ಅಣ್ಣ ತಮ್ಮಂದಿರೇ ಆಗುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾದಿಯ ಕುಟುಂಬದವರು ಭಾಗ ತೆಗೆದುಕೊಂಡ ನಂತರ ಅವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ಇಲ್ಲ ಸ್ವಲ್ಪ ದಿನ ಇದ್ದರು. ಅವರು ಎಂದಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.